ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಹುಮನಾಬಾದ.

ಸಿ.ಸಿ ನಂ.2782/2022
ಸಿ.ಡಬ್ಲ್ಯೂ3 ಪಿ.ಡಬ್ಲ್ಯೂ4

ಹೆಸರು : ಈರಪ್ಪಾ ತಂದೆ ಬಸಪ್ಪಾ ಹಳ್ಳೀಖೇಡ

ವಯಸ್ಸು : 50- ವರ್ಷ

ಉದ್ಯೋಗ : ಒಕ್ಕಲುತನ

ವಾಸ : ಮರಕಲ್

ದಿನಾಂಕ: 08-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಮುಖ್ಯ ವಿಚಾರಣೆ: ಶ್ರೀ ಸಸಅ ರವರಿಂದ:

ನನಗೆ ಚಾಸಾ-1 ಮತ್ತು 2 ರವರ ಹಾಗೂ ಆರೋಪಿತನ ಪರಿಚಯ ಇರುತ್ತದೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-1(ಸಿ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ಸಿತಾಳಗೇರಾ ಗ್ರಾಮದಲ್ಲಿ ಪೊಲೀಸರ ಕೋರಿಕೆಯ ಮೇಲೆ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ಮದ್ಯದ ಬಾಟಲಿಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ, ಆಲಿಸಿ ಅನುಮತಿಯನ್ನು ನೀಡಲಾಯಿತು.**)**

ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದಃ

ದಿನಾಂಕ 25-02-2022 ರಂದು ಸಾಯಂಕಾಲ 04-15 ಗಂಟೆಗೆ ಚಾಸಾ-1 ರವರು ನಮ್ಮನ್ನು ಠಾಣೆಗೆ ಕರೆಯಿಸಿದ ಮೇರೆಗೆ ನಾವು ಠಾಣೆಗೆ ಹಾಜರಾದಾಗ ಚಾಸಾ-1 ರವರು

ತಮಗೆ ಬಂದ ಬಾತ್ಮಿ ವಿಷಯವನ್ನು ನಮಗೆ ತಿಳಿಸಿ ದಾಳಿಯಲ್ಲಿ ಭಾಗವಹಿಸಲು ಕೋರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಮತ್ತು ಪೊಲೀಸರು ಸೇರಿ ಸರ್ಕಾರಿ ಜೀಪನಲ್ಲಿ 04-30 ಗಂಟೆಗೆ ಠಾಣೆಯನ್ನು ಬಿಟ್ಟು ಬಾತ್ಮಿ ಬಂದ ಸ್ಥಳವಾದ ಸಿತಾಳಗೇರಾ ಗ್ರಾಮದ ನಾಗಪ್ಪ ಇವರ ಮನೆಯಿಂದ ಸ್ವಲ್ಪ ದೂರದಲ್ಲಿ ಜೀಪ ನಿಲ್ಲಿಸಿ ಕೆಳಗೆ ಇಳಿದು ಮರೆಯಲ್ಲಿ ನಿಂತು ಕಾದು ನೋಡಿದೆವು ಎಂದರೆ ಸರಿಯಲ್ಲ. ಅಲ್ಲಿ ನಾಗಪ್ಪ ನಿಂಗೋಂಡ ರವರ ಮನೆಯ ಪಕ್ಕದ ರಸ್ತೆಯ ಬದಿಯಲ್ಲಿ ಯಾರೋ ಒಬ್ಬ ವ್ಯಕ್ತಿ ಅನಧಿಕೃತ ವಾಗಿ ಸರಾಯಿ ಮಾರಾಟ ಮಾಡಿದ್ದನು ಎಂದರೆ ಸರಿಯಲ್ಲ. ಅದನ್ನು ಖಚಿತ ಪಡಿಸಿಕೊಂಡು ಪೊಲೀಸರು ಸಾಯಂಕಾಲ 05-00 ಗಂಟೆ ದಾಳಿ ಮಾಡಿದ ಆತನನ್ನು ಹಿಡಿದುಕೊಂಡು, ಚಾಸಾ-1 ರವರು ಆತನ ಹೆಸರು ವಿಚಾರಿಸಿದಾಗ ಆತನು ತನ್ನ ಹೆಸರು ನಾಗಪ್ಪ ತಂದೆ ಧಶರಥ ಅಂತಾ ತಿಳಿಸಿದನು ಎಂದರೆ ಸರಿಯಲ್ಲ. ಆತನ ಕೈಯಲ್ಲಿದ್ದ ಬಿಳಿ ಚೀಲವನ್ನು ಪರೀಶಿಲಿಸಿದಾಗ ಅದರಲ್ಲಿ 2 ಪ್ಲಾಸ್ಟಿಕ ಡಬ್ಬಿಗಳು ಇದ್ದವು ಎಂದರೆ ಸರಿಯಲ್ಲ. ಒಂದು ಡಬ್ಬಿ ತೆಗೆದು ನೋಡಿದಾಗ ಅದರಲ್ಲಿ 90 ಎಮ್.ಎಲ್. ನ ಯು.ಎಸ್. ವಿಸ್ಕಿಯ 96 ಪ್ಲಾಸ್ಟಿಕ ಡಬ್ಬಿಗಳು ಇದ್ದವು ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಡಬ್ಬಿ ತೆರೆದು ನೋಡಿದಾಗ ಅದರಲ್ಲಿ 90 ಎಮ್.ಎಲ್. ನಯು.ಎಸ್. ವಿಸ್ಕಿಯ 96 ಪ್ಲಾಸ್ಟಿಕ ಬಾಟಲಿಗಳು ಇದ್ದವು ಎಂದರೆ ಸರಿಯಲ್ಲ. ಚಾಸಾ-1 ರವರು ಆತನಿಗೆ ಸರ್ಕಾರದಿಂದ ಪರವಾನಿಗೆ ವಿಚಾರಿಸಿದಾಗ ಆತನು ಯಾವುದೆ ಪರವಾನಿಗೆ ಇರುವುದಿಲ್ಲ ಅಂತಾ ಅನಧಿಕೃತವಾಗಿ ಮಾರಾಟ ಮಾಡುತ್ತಿದ್ದೇನೆ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆತನ ಬಳಿಯಲ್ಲಿದ್ದ ಪ್ಲಾಸ್ಟಿಕ ಚೀಲವನ್ನು ಬಿಳಿ ಬಟ್ಟೆಯಲ್ಲಿ ನಮ್ಮ ಸಮಕ್ಷಮದಲ್ಲಿ ಎಲ್ಲ ಮದ್ಯದ ಬಾಟಲಿಗಳನ್ನು ಹಾಕಿ ಐ.ಬಿ.ಎಮ್. ಎಂಬ ಸೀಲ್ ನಿಂದ ಮೊಹರು ಮಾಡಿ ನಮ್ಮ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ.. ನಂತರ ಚಾಸಾ-1 ರವರು ಮುದ್ದೆ ಮಾಲು, ಆರೋಪಿಯನ್ನು ತಮ್ಮ ವಶಕ್ಕೆ ಪಡೆದು ಸ್ಥಳದಲ್ಲಿ 5-00 ರಿಂದ 06-00 ಗಂಟೆಯವರೆಗೆ

ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರಂತೆ ಪಂಚನಾಮೆಯನ್ನು ಮಾಡಿದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್.

ಪಾಟೀ ಸವಾಲು:ಶ್ರೀ. ಎಲ್.ವಿ.ಎನ್. ಆರೋಪಿತನ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನಿವೇಧಿಸಿಕೊಂಡಿರುತ್ತಾರೆ.

ಮರು ವಿಚಾರಣೆ: ಇಲ್ಲ.

(ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ. ಸರಿ ಇದೆ.

ಪ್ರಧಾನ ಜೆಎಂಎಫ್ ಸಿ ನ್ಯಾಯಾಧೀಶರು
ಹುಮನಾಬಾದ.